

## ಕಾಗಕ್ಕ ಗುಬ್ಬಕ್ಕನ ಕಥೆ

ಸ್ಟಾರ್ ಸುವರ್ಣದ 'ಸಂಘರ್ಷ'ದ ಚಿತ್ರಕಥೆ ಸಾಹಿತಿ ಮತ್ತು ನಿರ್ದೇಶಕರು 'ಸುಧಾ' ಜಾಣರ ಪೆಟ್ಟಿಗೆ ನೋಡುವುದಿಲ್ಲ ಎಂದೆನಿಸುತ್ತಿದೆ. ನೋಡಿದ್ದರೆ ಇವರಿಬ್ಬರೂ ಬ್ಲಂಡರ್ ಮಿಸ್ಟೇಕ್ ಮಾಡುತ್ತಿರಲಿಲ್ಲ. ಯಾವೊಬ್ಬ ಅಸಿಸ್ಟಂಟ್ ಕಮಿಶನರೂ ಮೀನಿನ ಹರಾಜಿನಲ್ಲಿ ಮೂಗು ತೂರಿಸುವ ಅಧಿಕಾರವಿಲ್ಲ. ಮೀನುಗಾರಿಕೆ ಇಲಾಖೆ ಜಿಲ್ಲಾ ಪಂಚಾಯತಿಯಡಿ ಬರುತ್ತದೆ. ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರು, ತಾಲ್ಲೂಕು ಮಟ್ಟದಲ್ಲಿ ಸಹಾಯಕ ನಿರ್ದೇಕರು ಇರುತ್ತಾರೆ. ಅವರೂ ಕೂಡ ಕಾನೂನು ಪ್ರಕಾರ ಮೀನು ಹರಾಜು ಪ್ರಕ್ರಿಯೆಯನ್ನು ಟೆಂಡರ್ ಮೂಲಕ ಅದೂ ಕೂಡ ಪೇಪರಿನಲ್ಲಿ ಪ್ರಕಟಿಸಿ ನಡೆಸುತ್ತಾರೆ. ಆದರೆ, ಈ ಧಾರಾವಾಹಿಯಲ್ಲಿ ಕಂದಾಯ ಇಲಾಖೆಯ ಅಸಿಸ್ಟಂಟ್ ಕಮಿಶನರ್ ತನ್ನ ಕೇಡರಿನ ಅಧಿಕಾರಿಯೋರ್ವನನ್ನು ನಿಂತ ಕಾಲ ಮೇಲೆ ಹದಿನೈದು ದಿನಗಳಮಟ್ಟಿಗೆ ಸಸ್ಪೆಂಡ್ ಮಾಡಿಸುವುದರ ಮೂಲಕ ಈ ಧಾರಾವಾಹಿ ನೋಡುಗರಿಗೆ ಕಾಗಕ್ಕ ಗುಬ್ಬಕ್ಕ ಕಥೆಯನ್ನು ಹೇಳ ಹೊರಟಂತಿದೆ!

ಧಾರಾವಾಯಿಯಲ್ಲಿ ಸಂಘರ್ಷ ಸೃಷ್ಟಿಸುವ ತರಾತುರಿಯಲ್ಲಿ ವಾಸ್ತವವನ್ನು ಇಷ್ಟರಮಟ್ಟಿಗೆ ಹಾಳುಗೆಡವಿದರೆ ಹೇಗೆ? ವೀಕ್ಷಕರನ್ನು ಇಷ್ಟರಮಟ್ಟಿಗೆ ಮೂರ್ಖರನ್ನಾಗಿಸುವುದು ಸರಿಯೇ? ಧಾರಾವಾಹಿಯ ಈ ಇಬ್ಬರು ತಂತಮ್ಮ ಬುದ್ಧಿಮತ್ತೆಯನ್ನು ಇಷ್ಟರಮಟ್ಟಿಗೆ ಡಿಗ್ರೇಡ್ ಮಾಡಿಕೊಳ್ಳುವುದರ ಮೂಲಕ ನೋಡುಗರ ದೃಷ್ಟಿಯಲ್ಲಿ ಕುಬ್ಜರಾದರೆ ಹೇಗೆ?

—ರಮಾಮಣಿ ಎಂ.ಆರ್., ಚಿತ್ರದುರ್ಗ

## ಚುನಾವಣಾ ಮತ್ತು ಸುದ್ದಿವಾಹಿನಿಗಳು

ಸಾಮಾನ್ಯವಾಗಿ ಚುನಾವಣಾ ಫಲಿತಾಂಶಗಳು ಸುದ್ದಿವಾಹಿನಿಗಳಿಗೆ ಮಹತ್ವದ ಸಂಗತಿ. ಆ ದಿನ ಸುದ್ದಿವಾಹಿನಿಗಳಿಗೆ ವೀಕ್ಷಕರು ಮುಗಿ ಬೀಳುತ್ತಾರೆ. ಸುದ್ದಿ ವಾಹಿನಿಗಳು ಎಂದಿಗೂ ಆ ಅವಕಾಶ ಕಳೆದುಕೊಳ್ಳುವುದಿಲ್ಲ. ವಿಪರ್ಯಾಸ ಎನ್ನುವಂತೆ ಈ ಬಾರಿ ಒಂದೆರಡು ಸುದ್ದಿವಾಹಿನಿಯನ್ನು ಹೊರತುಪಡಿಸಿ ಉಳಿದ ವಾಹಿನಿಗಳು ಪಂಚಾಯತ್ ಚುನಾವಣೆ ಫಲಿತಾಂಶದತ್ತ ಅಷ್ಟು ಗಮನ ನೀಡಲಿಲ್ಲ.

ಟೀವಿ ಚಾನೆಲ್‌ಗಳಲ್ಲಿ ವಿಸ್ತೃತ ವರದಿಯನ್ನು ನಿರೀಕ್ಷಿಸಿದ್ದ ವೀಕ್ಷಕರಿಗೆ ಸಂಕ್ಷಿಪ್ತ ವರದಿಗಳು ದೊರಕಿದವು. ಸದಾ ಪೈಪೋಟಿಯಲ್ಲಿರುವ ಸುದ್ದಿ ವಾಹಿನಿಗಳು, ಪಂಚಾಯತ ಚುನಾವಣಾ ಫಲಿತಾಂಶ ನೀಡುವ ನಿಟ್ಟಿನಲ್ಲಿ ನಿರ್ಲಿಪ್ತತೆ ತೋರಿಸಿರುವುದು ಆಶ್ಚರ್ಯವಾಗಿದೆ.

—ರಮಾನಂದ ಶರ್ಮಾ, ನವದೆಹಲಿ

## ಬೊಂಬು ಮರವಲ್ಲ

ದೂರದರ್ಶನದಲ್ಲಿನ ಪ್ರೌಢಶಾಲಾ ಮಕ್ಕಳ ಪಾಠ ಕಾರ್ಯಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ಇರುತ್ತದೆ. ಏಕೆಂದರೆ, ಇದು ಸಾಕಷ್ಟು ಮಕ್ಕಳ ಕಲಿಕೆಗೆ ಅನುಕೂಲವೂ ಆಗಿದೆ. ಇದರಲ್ಲಿನ ಕೆಲವು ಋಣಾತ್ಮಕ ವಿಷಯಗಳೆಂದರೆ ಪಾಠ ವಿವರಿಸುವ ಸುಮಾರು ಶಿಕ್ಷಕರ ವಿಷಯ ನಿವೇದನೆ ತೀರ ನೀರಸವಾಗಿರುತ್ತದೆ. ಇದು ಮಕ್ಕಳಲ್ಲಿ ಉತ್ಸಾಹ ತರುವುದಿಲ್ಲ. ಇನ್ನೊಂದು ಇಂಗ್ಲಿಷ್ ಭಾಷೆಯ ಪಾಠದಲ್ಲಿ ಬೊಂಬಿನ ಚಿತ್ರ ವಿವರಿಸುವಾಗ ವಿಷಯ ನಿರೂಪಕರು ಅದನ್ನು ಬೊಂಬಿನ ಮರವೆಂದು ಪದೇ ಪದೇ ಹೇಳುತ್ತಾರೆ. ಆದರೆ ಇದು ಮರವಲ್ಲ ಬದಲಿಗೆ ಅದೊಂದು ಹುಲ್ಲಿನ ಜಾತಿಗೆ ಸೇರುವ ಸಸ್ಯವೇ ಹೊರತು ಮರವೆಂದು ಹೇಳುವುದಿಲ್ಲ. ಇಂತಹ ಸೂಕ್ಷ್ಮವಾದ ವಿಷಯಗಳು ಸರಿಯಾಗಿ ತಿಳಿಸದಿರುವುದು ತಪ್ಪು ಮಾಹಿತಿ ನೀಡಿದಂತಾಗುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

ವಾರದ ಪತ್ರ

## ಆನಂದದ ಮಾಸ್ಟರ್

ಹೆಸರಿನ ಮೊದಲಿಗೆ ಬಳಸಿದರೆ ಬಾಲಕನೆಂದೂ ಹೆಸರಿನ ನಂತರ ಬಳಸಿದರೆ ಸಾಧಕನೆಂದೂ ಅರ್ಥ ಕೊಡುವ ವಿಚಿತ್ರ ಪದ 'ಮಾಸ್ಟರ್'. ಇತ್ತೀಚಿನ ಕಾಮಿಡಿ ಕಿಲಾಡಿ ಮತ್ತು ಸರಿಗಮಪ ಮಹಾಸಂಗಮದಲ್ಲಿ ನಿರೂಪಕ ಮಾಸ್ಟರ್ ಆನಂದ್ ಅವರ ಮೂವತ್ತು ವರ್ಷಗಳ ಕಲಾ ಜೀವನವನ್ನು ಸುಂದರವಾಗಿ ಪರಿಚಯಿಸಿ ಗೌರವಿಸಲಾಯಿತು. ಶಂಕರನಾಗ್ , ಅನಂತನಾಗ್ , ಅಶ್ವಥ್ , ವಿಷ್ಣುವರ್ಧನ್, ರವಿಚಂದ್ರನ್ ಮೊದಲಾದ ಸಿನಿ ದಿಗ್ಗಜರ ಕೈಗೂಸಾಗಿ ಹಿರಿಯರನ್ನು ಅನುಕರಿಸುತ್ತಲೇ ನಟನೆ ಆರಂಭಿಸಿದವರು ಆನಂದ್. ನೂರಾರು ಚಿತ್ರಗಳಲ್ಲಿ ಬಾಲ ನಟರಾಗಿ, ಹಾಸ್ಯ ಧಾರಾವಾಹಿಗಳ ನಿರ್ದೇಶಕರಾಗಿ, ಇಂದು ನಾಯಕ ನಟನಾಗಿ ಬೆಳೆದ ಆನಂದ್ ತಾವಿನ್ನೂ ನಟನೆಯಲ್ಲಿ ಬಾಲಕನೇ ಆದ್ದರಿಂದ 'ಮಾಸ್ಟರ್' ಪದವನ್ನು ಹಾಗೇ ಉಳಿಸಿಕೊಂಡಿರುವುದಾಗಿ ವಿನಮ್ರತೆ ತೋರಿದರು. ತನಗಾಗಿ ಎಲ್ಲ ತ್ಯಾಗ ಮಾಡಿದ ತಂದೆಯವರನ್ನು ನೆನೆದು ಕಣ್ಣೀರಿಟ್ಟು ಎಲ್ಲರ ಮನ ಕಲಕುವಂತೆ ಮಾಡಿದರು.

'ಗೌರಿ ಗಣೇಶ' ಚಿತ್ರದ ಯಶಸ್ಸಿಗೆ ಈ ಬಾಲಕನೂ ಕಾರಣವೆಂದು ಅನಂತನಾಗ್ ತಮ್ಮ ಕಟ್ ಔಟ್ ಜೊತೆಗೆ ಮಾಸ್ಟರ್ ಆನಂದ್ ಕಟ್ ಔಟನ್ನೂ ನಿಲ್ಲಿಸಿ ಅವರ ಹೃದಯ ವೈಶಾಲ್ಯತೆ ಮೆರೆದಿದ್ದನ್ನು ನೆನೆದರು. ರವಿಚಂದ್ರನ್ ಎಲ್ಲರಿಗೂ 'ಈ ಹುಡುಗನ್ನ ನಿಮ್ಮ ಚಿತ್ರಕ್ಕೆ ಹಾಕಿಕೊಳ್ಳಿ : ಚೆನ್ನಾಗಿ ಮಾಡ್ತಾನೆ' ಎಂದು ಶಿಫಾರಸು ಮಾಡಿದ್ದನ್ನು ಸ್ಮರಿಸಿದರು. ಸಿನಿಮಾ ತುಣುಕುಗಳ ಜೊತೆಗೆ ಬಾಲ ಕಲಾವಿದರು ಪ್ರಸ್ತುತಪಡಿಸಿದ ಮಾಸ್ಟರ್ ಆನಂದ್ ಜೀವನಗಾಥೆ ಸದಾ ನೆನಪಿನಲ್ಲಿ ಇರುವಂತೆ ಮೂಡಿ ಬಂತು. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಮಾತಿಗೆ ಉದಾಹರಣೆಯಾಗಿ, ಒಬ್ಬ ಒಳ್ಳೆಯ ನಿರೂಪಕರಾಗಿರುವ ಆನಂದ್ ಅವರಿಂದ ಜೊತೆಯವರು ಕಲಿಯುವುದು ಬಹಳಷ್ಟಿದೆ ಎನ್ನಿಸಿತು.

—ವಾ. ಮುರಳೀಧರ, ತೀರ್ಥಹಳ್ಳಿ

## ಕುತೂಹಲ ನಿರೀಕ್ಷಿಸಬಹುದೇ?

ಝೀ ಕನ್ನಡದ 'ಸತ್ಯ' ಆರಂಭವಾಗುತ್ತದೆ ಎಂದಾಗ, ಏನೋ ಕುತೂಹಲದಿಂದ ಏನೋ ವಿಶೇಷವಾಗಿರಬಹುದು ಎಂದು ನೋಡಲು ಆರಂಭಿಸಿದೆ. ನೋಡುತ್ತಾ, ನೋಡುತ್ತಾ ಬೇಸರ ತರಿಸುತ್ತಿದೆ. ನಮ್ಮ ನಿರೀಕ್ಷೆಯನ್ನು ಹುಸಿಮಾಡಿದೆ. ಪಿತೂರಿ ಮಾಡುವ ಖಳನಾಯಕಿ, ಅಪ್ರಯೋಜಕನಾದ ಮನೆ ಅಳಿಯ, ಪೆದ್ದು ಪೆದ್ದಾಗಿ ಆಡುವ ನಾಯಕನ ಗೆಳೆಯ ಹೀಗೆ ಸ್ವಾರಸ್ಯವಿಲ್ಲದ ಪಾತ್ರಗಳು ವೀಕ್ಷಕರ ನಿರೀಕ್ಷೆಯನ್ನು ಮುಟ್ಟುತ್ತಿಲ್ಲ. ಮುಂದೆ ಕಥೆಯ ಓಟ ಅವರನ್ನು ಸೆಳೆಯಲು ಕುತೂಹಲಕರವಾಗಿ ಮುಂದುವರಿಯಬಹುದು ಎಂದು ನಿರೀಕ್ಷಿಸಬಹುದೇ?

—ಕೆ.ಎಸ್. ಸವಿತ,ಬೆಂಗಳೂರು

## ಜ್ಞಾನ ಭಂಡಾರ

ಅರಿವು ಜ್ಞಾನವನ್ನು ವಿಸ್ತರಿಸುವ ಚಂದನ ವಾಹಿನಿಯ 'ಥಟ್ಟಂತ ಹೇಳಿ' ಕಾರ್ಯಕ್ರಮದ ನಿರೂಪಕ ನಾ. ಸೋಮೇಶ್ವರ ಅವರು ಪ್ರಶ್ನೋತ್ತರ ಪ್ರಸ್ತುತ ಪಡಿಸುವುದರ ಜೊತೆಗೆ ವಿಷಯ ಸಂಬಂಧಿ ವಿವರಣೆ ನೀಡುತ್ತಾರೆ. ಆಗ ಅವರು ನೀಡುವ ಪದ ಪುಂಜಗಳ ಭಂಡಾರ ಶ್ಲಾಘನೀಯ. ಅವರು ಅಷ್ಟು ಆಳವಾದ ಜ್ಞಾನ ಪಡೆಯಲು ಎಷ್ಟು ಅಭ್ಯಾಸ ಮಾಡಿರಬೇಕು. ಅವರು ಸಹನಶೀಲರಾಗಿ ನೀಡುವ ವಿವರಣೆ ಮೆಚ್ಚತಕ್ಕದ್ದು. ಇಂತಹ ಅದ್ಭುತ ಕಾರ್ಯಕ್ರಮವನ್ನು ರೂಪಿಸಿದ ಎಲ್ಲರೂ ಅಭಿನಂದನೆಗೆ ಪಾತ್ರರು.

—ಕೆ. ಹೊನ್ನಪ್ಪ, ಕ್ಯಾತ್ಸಂದ್ರ

## ಹಾಡಿಗೆ ನಿಯಂತ್ರಣ ಇರಲಿ

ಇತ್ತೀಚೆಗೆ ಸಿನಿಮಾ ಹಾಡುಗಳು ಅತ್ಯಂತ ಕಳಪೆ ಭಾಷೆ ಪದಗಳನ್ನು ಪ್ರಾಸ ಬದ್ಧವಾಗಿ ಜೋಡಿಸಿ ರೆಡಿಯಾಗುತ್ತಿದೆ. ಸಾಹಿತ್ಯ ಉತ್ತಮ ಪಡಿಸಲು ಯಾರು ತಯಾರಿಲ್ಲ. ಕಾಲಕ್ಕೆ ತಕ್ಕಂತೆ ಎಂಬ ಜಿಜ್ಞಾಸೆಯಿಂದ ಜೊತು ಬೀಳುವುದು ನಮ್ಮ ಸಂಸ್ಕೃತಿಯ ಅವನತಿಗೆ ಕಾರಣವಾಗಬಹುದು. ದಯಮಾಡಿ ಅಂತಹ ಹಾಡುಗಳನ್ನು ಟೀವಿಗಳಲ್ಲಿ ಪ್ರಸಾರ ಮಾಡದಂತೆ ನಿಯಂತ್ರಿಸಿ.

—ಕೆ.ಎಚ್. ತೇಜೇಶ್ ಚಂದ್ರ, ತುಮಕೂರು